ಹಾನಿಯಾಗಿರುತ್ತದೆ. ಆದರಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 27,015 ಹೆಕ್ಟೇರ್ ಮುಂಗಾರಿ ಬೆಳೆಗಳು ಹಾಗೂ 14,906 ಹೆಕ್ಟೇರ್ ಹಿಂಗಾರಿ ಬೆಳೆಗಳು ಹಾನಿಯಾಗಿರುವುದು ವರದಿಯಾಗಿರುತ್ತದೆ. ಒಟ್ಟು 41,921 ಹೆಕ್ಟೇರ್ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು ಕೃಷಿ ಇಲಾಖಾವತಿಯಿಂದ ಇದನ್ನು ಅಂದಾಜು ಮಾಡಿಸಿ ಬೆಳೆಹಾನಿಗೊಳಗಾದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.500–00 ರಂತೆ ಮುಂದಿನ ಬೆಳೆಯನ್ನು ಬೆಳೆಯಲು ಅಗತ್ಯ ಕೃಷಿ ಸಾಮಗ್ರಿಗಳ ಕಿರುಚೀಲಗಳನ್ನು ಕೊಡಲು ಸೂಕ್ತ ಪ್ರಸ್ತಾವನೆಯನ್ನು ತಯಾರಿಸಲಾಗಿದೆ.

ಆ) ಕಿರು ಚೀಲಗಳನ್ನು ನೀಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಬೆಳೆಗಳ ಹಾನಿ

203 (135q) ಶ್ರೀ ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಎಷ್ಟು ಎಕರೆ ಬೆಳೆ ನಾಶವಾಗಿದೆ ಹಾಗೂ ಹಾಳಾದ ಪಂಪು ಸೆಟ್ಟುಗಳೆಷ್ಟು ?

ಆ) ಸದರಿ ಹಾಳಾದ ಪಂಪು ಸೆಟ್ಟುಗಳಿಗೆ ಸರ್ಕಾರವು ಎಷ್ಟು ಪರಿಹಾರ ನೀಡಿದೆ ?

ಇ) ಆ ನೆರೆ ಹಾವಳಿಯಿಂದ ಎಷ್ಟು ಎಕರೆ ಭೂಮಿ ನಾಶವಾಗಿದೆ ?

ಈ) ನೆರೆ ಹಾವಳಿಯಿಂದ ಬೆಳೆ ನಾಶವಾದ ರೈತರಿಗೆ ಎಕರೆಗೆ ಎಷ್ಟು ಪರಿಹಾರ ಧನವನ್ನು ಸರ್ಕಾರವು ನೀಡಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)-

ಅ) ಸಿಂಧನೂರು ತಾಲ್ಲೂಕಿನಲ್ಲಿ 1,02,587.7100 ಎಕರೆ ಬೆಳೆ ನಾಶವಾಗಿದೆ ಹಾಗೂ 1,059 ಪಂಪು ಸೆಟ್ಟುಗಳು ಹಾಳಾಗಿರುತ್ತವೆ.

ಆ) ಹಾಳಾದ ಬಾವಿ:ಪಂಪು ಸೆಟ್ಟುಗಳಿಗೆ ರೂ.3,000–00 ನಂತೆ ಪರಿಹಾರವನ್ನು ನೀಡಲಾಗುವುದು.

ಇ) 1015 ಎಕರೆಯಷ್ಟು ವ್ಯವಸಾಯದ ಭೂಮಿ ನಾಶವಾಗಿರುತ್ತದೆ.

ಈ) ಬೆಳೆ ನಾಶವಾದ ರೈತರಿಗೆ ಪ್ರತಿ ಎಕರೆಗೆ 200–00 ರೂ.ನಂತೆ ಪರಿಹಾರವನ್ನು ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ನೀಡಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ನೆರೆ ಹಾವಳಿ

204 (136) ಶ್ರೀ. ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನವೆಂಬರ್ 16 ರಿಂದ 20 ರವರೆಗೆ ರಾಯಚೂರು ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಲ್ಲಿ ಮಳೆಯಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ನೆರೆ ಹಾವಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಪ್ರಾಣ ಹಾನಿಯಾದ ಸಂಖ್ಯೆ ಎಷ್ಟು ಮತ್ತು ಸರ್ಕಾರದಿಂದ ಅವರಿಗೆ ಎಷ್ಟು ಪರಿಹಾರ ಕೊಡಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ಪೂರ್ಣ ಬಿದ್ದ ಮನೆಗಳ ಸಂಖ್ಯೆ ಹಾಗೂ ಭಾಗಶಃ ಬಿದ್ದ ಮನೆಗಳು ಸಂಖ್ಯೆ ಎಷ್ಟು ?

ಈ) ಬಿದ್ದ ಮನೆಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ (ತಾಲ್ಲೂಕುವಾರು ಮಾಹಿತಿ ನೀಡುವುದು)

ಉ) ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ಪೂರ್ಣ ನಾಶವಾದ ಗ್ರಾಮಗಳ ಸಂಖ್ಯೆ ಎಷ್ಟು ಹಾಗೂ ಈ ಗ್ರಾಮಗಳಿಗೆ ಪುನರ್ವಸತಿಗಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

*ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು)-

ಅ) ರಾಯಚೂರು ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಈ ಕೆಳಗಿನಂತಿದೆ:

ತಾಲ್ಲೂಕಿನ ಹೆಸರು	ಮಳೆ ಪ್ರಮಾಣ (ಮಿಲಿ ಮೀಟರ್‌ನಲ್ಲಿ)
ರಾಯಚೂರು	40.5
ಮಾನ್ವಿ	147.0
ದೇವದುರ್ಗ	222.0
ಲಿಂಗಸುಗೂರು	155.2
ಸಿಂಧನೂರು	394.9
ಕುಷ್ಟಗಿ	209.0
ಕೊಪ್ಪಳ	202.2
ಗಂಗಾವತಿ	302.5
ಯಲ್ಬುರ್ಗಾ	156.3

ಆ) ನೆರೆ ಹಾವಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಪ್ರಾಣ ಹಾನಿಯಾದ ಮತ್ತು ಸರ್ಕಾರದಿಂದ ನೀಡಲಾದ ಪರಿಹಾರದ ವಿವರಗಳು ಈ ಕೆಳಕಂಡಂತಿವೆ.

ತಾಲ್ಲೂಕಿನ ಹೆಸರು	ಸಂಖ್ಯೆ	ಸರ್ಕಾರದಿಂದ ನೀಡಲಾದ ಪರಿಹಾರದ ಮೊತ್ತ ರೂ.
ರಾಯಚೂರು	1	40,000.00
ಮಾನ್ವಿ	5	2,00,000.00
ಲಿಂಗಸೂಗೂರು	1	40,000.00
ಸಿಂಧನೂರು	22	8,80,000.00
ಕುಷ್ಟಗಿ	1	40,000.00
ಕೊಪ್ಪಳ	1	40,000.00
ಗಂಗಾವತಿ	10	4,00,000.00
ಯಲ್ಬುರ್ಗಾ	1	40,000.00
ಒಟ್ಟು	42	16,80,000.00

ಇ) ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ಪೂರ್ಣ ಬಿದ್ದ ಮನೆಗಳ ಸಂಖ್ಯೆ 29,279 ಹಾಗೂ ಭಾಗಶಃ ಬಿದ್ದ ಮನೆಗಳ ಸಂಖ್ಯೆ 71,008

ಈ) ಹೌದು. ನೀಡಲಾಗುತ್ತಿದೆ.

ಇದುವರೆಗೂ ಪರಿಹಾರ ನೀಡಿದ ಬಗ್ಗೆ ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ.

ತಾಲ್ಲೂಕಿನ ಹೆಸರು	ಪ್ರಕರಣಗಳು	ನೀಡಲಾದ ಪರಿಹಾರದ ಮೊತ್ತ (ಲಕ್ಷ ರೂ.ನಲ್ಲಿ)
ರಾಯಚೂರು	368	7.160
ಮಾನ್ವಿ	354	7,080
ಸಿಂಧನೂರು	1,540	24,390
ಕೊಪ್ಪಳ	57	0.782
ಗಂಗಾವತಿ	1483	23.330

ಇತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಇತರೆ ತಾಲ್ಲೂಕುಗಳಲ್ಲಿ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಉ) 44 ಹಳ್ಳಿಗಳು ಪೂರ್ಣ ನಾಶವಾಗಿರುತ್ತವೆ. ವಿವರ ಈ ಕೆಳಗಿನಂತಿರುತ್ತದೆ.

ತಾಲ್ಲೂಕಿನ ಹೆಸರು	ಹಳ್ಳಿಗಳ ಸಂಖ್ಯೆ
ಗಂಗಾವತಿ	12
ಮಾನ್ವಿ	11
ಸಿಂಧನೂರು	21

ಈ ನೆರೆ ಹಾವಳಿಯಿಂದ ತೀವ್ರ ಹಾನಿಯಾದವರಿಗೆ ಶಾಶ್ವತ ಪರಿಹಾರ ಒದಗಿಸಲು ಸರ್ಕಾರವು ಒಂದು ಯೋಜನೆಯನ್ನು ರೂಪಿಸುತ್ತಿದೆ.

ಬಗರ್ ಹುಕುಂ ಸಾಗುವಳಿಯ ಪ್ರದೇಶ

205 (210) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಪ್ರದೇಶ ಎಷ್ಟಿದೆ ?

ಆ) ಇದರ ಸಾಗುವಳಿಗಾಗಿ ಹಾಗೂ ಸಕ್ರಮ ಮಾನ್ಯತೆಗಾಗಿ ಬಂದ ಅರ್ಜಿಗಳೆಷ್ಟು ?

ಇ) ಅವುಗಳಲ್ಲಿ ಇದುವರೆವಿಗೂ ವಿಲೇವಾರಿಯಾದ ಅರ್ಜಿಗಳೆಷ್ಟು ?

ಈ) ಮಾನ್ಯತೆ ಪಡೆದ ಅರ್ಜಿಗಳಲ್ಲಿ ಹರಿಜನ–ಗಿರಿಜನರ ಸಂಖ್ಯೆ ಎಷ್ಟು ?

ಉ) ಈ ಭೂಮಿ ವಿಲೇವಾರಿಯು ಇಷ್ಟು ಮಂದಗತಿಯಲ್ಲಿ ನಡೆದಲ್ಲಿ, ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿಯ ಪರಿವೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಮತ್ತು ಆ) ದಿನಾಂಕ 19.9.1991ರವರೆಗೆ 25,80,214 ಎಕರೆ ಜಮೀನಿನ ಸಕ್ರಮೀಕರಣಕ್ಕಾಗಿ 10,86,826 ಅರ್ಜಿಗಳು ಬಂದಿರುತ್ತವೆ.